ಅದಕ್ಕೆ ಕೆಲವು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ, ಆದುದರಿಂದ ನೀವು ಬನ್ನಿ, ಮಾತನಾಡೋಣ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ಅಧ್ಯಕ್ಷರೇ, ಅಮೆಂಡ್‌ಮೆಂಟ್ ಮಾಡಿ ಚರ್ಚೆ ಮಾಡುವುದಕ್ಕಿಂತ ಎಲ್ಲಾ ವಿಷಯಗಳನ್ನು ಚರ್ಚೆ ಮಾಡೋಣ.

ಅಧ್ಯಕ್ಷರು:- ಚರ್ಚೆ ಮಾಡೋಣವೆಂದು ಹೇಳುತ್ತಾ ಇದ್ದೇನೆ, This is a fit case for discussion

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾನ್ಯ ಸುಬ್ಬಾರೆಡ್ಡಿಯವರು, ಎಲ್ಲೋ ಒಂದು ಕಡೆ ಹೈಕೋರ್ಟ್‌ನ ಬಗ್ಗೆ ಚರ್ಚೆ ಮಾಡಬಾರದೆನ್ನುವ ಬಗ್ಗೆ ಮಾತನಾಡಿದರು. ಅವರು ವಕೀಲರು ನಾನೂ ಕೂಡ ನ್ಯಾಯಾಧೀಶರ ಕುಟುಂಬದಿಂದ ಬಂದಿರುವವನು, ಆದುದರಿಂದ ಇಲ್ಲಿ ಅವರವರ ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ, ಇಲ್ಲಿ ನಾವು ಶಾಸಕರಾಗಿ ನಾವು ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ನಾನು ಟೈಮ್ ಫಿಕ್ಸ್ ಮಾಡಬೇಕೆಂದರೆ ಸರ್ಕಾರವನ್ನು ಕೇಳಬೇಕು, ನಾಳೆ 4 ಗಂಟೆಗೆ ಬಿ.ಎ.ಸಿ. ಮೀಟಿಂಗ್ ಕರೆಯುತ್ತಿದ್ದೇವೆ, ಮತ್ತೆ ರಾಜ್ಯಪಾಲರ ಭಾಷಣದ ಚರ್ಚೆ ಇದೆ, ಶಾಸನಗಳ ರಚನೆ ಮಾಡಬೇಕಾಗಿದೆ, ಇದೆಲ್ಲವನ್ನೂ ನೋಡಿಕೊಂಡು ಈ ವಿಷಯವನ್ನು ಯಾವಾಗ ತೆಗೆದುಕೊಳ್ಳಬೇಕೆಂಬ ಬಗ್ಗೆ ತೀರ್ಮಾನ ಮಾಡುತ್ತೇವೆ. ಈಗ ಊಟಕ್ಕೆ ಸಮಯವಾಗಿದೆ. ಈಗ ಸದನವನ್ನು ಎರಡೂವರೆ ಘಂಟೆವರೆಗೆ ಮೂಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1.30ಕ್ಕೆ ಮುಂದೂಡಲ್ಪಟ್ಟು ಮತ್ತೆ ಎರಡೂವರೆ ಘಂಟೆಗೆ ಸೇರಲು ತೀರ್ಮಾನಿಸಿತು)

(ಸದನವು 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತ್ತು. ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು:- ಏನು ಈ ಕ್ರಿಕೆಟ್ ಜ್ವರವು ನಮ್ಮ ಸಭೆಗೂ ತಾಕಿದಂತೆ ಕಾಣುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಧ್ಯಾಹ್ನವೂ ಕೂಡ ಒಂದು ಹಾಜರಾತಿ ಪುಸ್ತಕವನ್ನು ಇಡಬೇಕು. ಹಾಗೆಯೇ ಮಂತ್ರಿಗಳಿಗೂ ಹಾಜರಾತಿ ಪುಸ್ತಕವನ್ನು ಇಡಬೇಕು. ಅಸೆಂಬ್ಲಿ ಎಂದರೆ ಸದಸ್ಯರು ಅಷ್ಟೇ, ಮಂತ್ರಿಗಳು ಅಷ್ಟೇ, ತಾವು ಕೋರಂ ಬೆಲ್ ಹೊಡಿಸುವುದಕ್ಕೆ ಪ್ರಾರಂಭ ಮಾಡಿ ಈಗ ಸಮಯ 3-20 ಆಯಿತು. ಈಗಾಗಲೇ ಬೆಲ್ ಹೊಡೆಯುವುದಕ್ಕೆ ಪ್ರಾರಂಭವಾಗಿ ಅರ್ಧ ತಾಸು ಆಯಿತು.

ಅಧ್ಯಕ್ಷರು:- ಮಾನ್ಯ ಎಸ್.ಎಸ್. ಪಾಟೀಲರೆ, ಈಗಾಗಲೇ ಬೆಲ್ ಹೊಡೆಯುವುದಕ್ಕೆ ಪ್ರಾರಂಭವಾಗಿ 40 ನಿಮಿಷವಾಯಿತು. ಬೆಲ್ ಹೀಟ್ ಆಗಿ ಸುಟ್ಟು ಹೋಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಹೌದು, ಮಾನ್ಯ ಅಧ್ಯಕ್ಷರೆ, ಮತ್ತೇ ಹೇಗೆ ಮಾಡುವುದು ಅಧ್ಯಕ್ಷರೆ? ನಾವು ಆಡಳಿತ ಪಕ್ಷದವರಿಗೆ ಹೇಳುವ ಹಾಗಿಲ್ಲ. ಏಕೆಂದರೆ ನಮ್ಮವರೂ ಹಾಗೆಯೇ ಇದ್ದಾರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಊ) ಹೆಚ್ಚುವರಿ ಆಹಾರ ಧಾನ್ಯ ಬಿಡುಗಡೆಗಾಗಿ ದೆಹಲಿಗೆ ಸರ್ವಪಕ್ಷನಿಯೋಗ ಹೋಗುವ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :- ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಎದ್ದು ನಿಂತುಕೊಂಡಿದ್ದೇನೆ ಈ ಬಿಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ಇವತ್ತು ನಾವು ಪತ್ರಿಕೆಗಳಲ್ಲಿ ಒಂದು ವಿಚಾರವನ್ನು ಓದಿದ್ದೇವೆ. ಕೇಂದ್ರದಲ್ಲಿರತಕ್ಕಂತಹ ನಮ್ಮ ಸರ್ಕಾರದ ಪ್ರತಿನಿಧಿಗಳಾದ ಶ್ರೀ ಟಿ.ಬಿ. ಜಯಚಂದ್ರರವರು ದೆಹಲಿಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಹೋಗುತ್ತಿದೆ, ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ಆಹಾರಧಾನ್ಯಗಳನ್ನು ಕೇಳುವುದಕ್ಕೆ ಹೋಗುತ್ತಿದೆ. ಸಾಮಾನ್ಯವಾಗಿ ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಇಲ್ಲಿ ಬಂದಿರತಕ್ಕಂತಹ ಸಂಪ್ರದಾಯವೇನೆಂದರೆ, ಈ ಸದನದಲ್ಲಿ ಈ ರೀತಿಯ ಹೇಳಿಕೆಮಗಳನ್ನು ಸಂಬಂಧಪಟ್ಟಂತಹ ಮಂತ್ರಿಗಳು ಮಾಡತಕ್ಕಂಥದ್ದು ವಾಡಿಕೆಯಾಗಿದೆ. ಶ್ರೀ ಟಿ.ಬಿ. ಜಯಚಂದ್ರರವರು ಕರ್ನಾಟಕಕ್ಕೋಸ್ಕರ ಸರ್ಕಾರ ಕಳುಹಿಸತಕ್ಕಂತಹ ಕಾಗದಪತ್ರಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬಹುದು, ಅದು ಬೇರೆಯ ವಿಚಾರವಾಗಿದೆ. ಆದರೆ ವಸ್ತುಸ್ಥಿತಿಯಲ್ಲಿ ವಿಧಾನಸಭೆ ನಡೆಯತಕ್ಕಂತಹ ಸಂದರ್ಭದಲ್ಲಿ ನಮ್ಮೆಲ್ಲರನ್ನೂ ಸಹಿತ ವಿಶ್ವಾಸಕ್ಕೆ ತೆಗೆದುಕೊಂಡು ಹೋಗತಕ್ಕಂತಹ ಕೆಲಸಗಳು ಆಗಬೇಕಾಗುತ್ತದೆ. ಈಗ ನಮಗೆ ತಿಳುವಳಿಕೆ ಇರುವ ಹಾಗೆ ಸುಮಾರು 3 1/2 4 ಲಕ್ಷಗಳಷ್ಟು ಆಹಾರಧಾನ್ಯಗಳನ್ನು ಈ ಬರಪರಿಹಾರದ ಕೆಲಸಕ್ಕಾಗಿ ಕೊಟ್ಟಿದ್ದರು, ಮತ್ತು ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಸುಮಾರು 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನು ನಾವು ಕೇಳಿದ್ದೇವೆ ಮತ್ತು ಅವರು ಉತ್ತರದಲ್ಲಿ ಹಾಗೆ ಹೇಳಿದ್ದಾರೆ. ಯಾವ ರೀತಿಯಾಗಿ ಅವರು ದುಡ್ಡನ್ನು ಖರ್ಚು ಮಾಡಿದ್ದಾರೆ ಅದು ನಮಗೆ ಗೊತ್ತಿಲ್ಲ. ಆಹಾರಧಾನ್ಯಗಳನ್ನು ಮಾತ್ರ ಎಲ್ಲಾ ಕಡೆಗಳಲ್ಲೂ ಕೊಡುತ್ತಿರುವುದು ನಿಜ ಅದು ವಾಸ್ತವಾಂಶ. ಈಗ ನಮಗೆ ಬೇಕಾಗಿರುವಂತಹದ್ದು ಅದು ಸರ್ವಪಕ್ಷದ ನಿಯೋಗವೇ ಅಥವಾ ಅದು ಸರ್ಕಾರದ ನಿಯೋಗವೇ? ಆ ನಿಯೋಗದಲ್ಲಿ ಯಾರು ಯಾರು ಇದ್ದಾರೆ? ಏನು ಬೇಡಿಕೆಗಳನ್ನು ಇಡುತ್ತಿದ್ದೀರಿ? ತಾವು ಎಷ್ಟು ಆಹಾರಧಾನ್ಯಗಳನ್ನು ಕೇಳುತ್ತಿದ್ದೀರಿ, ಎನ್ನತಕ್ಕಂಥದ್ದರ ಬಗ್ಗೆ ಈ ಸಭೆಗೆ ತಿಳಿಸಬೇಕೆಂದು ಹೇಳಿ ನಾನು ನಿಮ್ಮ ಮೂಲಕ ಒತ್ತಾಯವನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಗೃಹ ಸಚಿವರೆ, ತಾವು ಇದರ ಬಗ್ಗೆ ಏನಾದರೂ ಹೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ನಾಳೆ ಮಧ್ಯಾಹ್ನ 3 ಗಂಟೆಗೆ ಉಪ ಪ್ರಧಾನ ಮಂತ್ರಿಗಳನ್ನು ಭೇಟಿಯಾಗುವುದಕ್ಕೆ ನಮಗೆ ಟೈಮ್ ಕೊಟ್ಟಿದ್ದಾರೆ. ಮತ್ತೆ ಬೆಳಿಗ್ಗೆ 12 ಗಂಟೆಗೆ ಆಗ್ರಿಕಲ್ಚರ್ ಮಿನಿಸ್ಟರ್‌ರವರು ನಮಗೆ ಟೈಮ್ ಕೊಟ್ಟಿದ್ದಾರೆ. ಇದರಲ್ಲಿ ಸನ್ಮಾನ್ಯ ಗೃಹ ಸಚಿವರ ನೇತೃತ್ವದಲ್ಲಿರತಕ್ಕಂತಹ ಸಚಿವ ಸಂಪುಟ ಉಪಸಮಿತಿ ನಾಳೆ ಹೋಗುತ್ತಿದ್ದೇವೆ. ನಾವು 11 ಲಕ್ಷ ಟನ್ ಅಕ್ಕಿಯನ್ನು ಕೇಳಿದ್ದೇವೆ, ಈಗಾಗಲೇ 365 ಲಕ್ಷ ಟನ್ ಅಕ್ಕಿಯನ್ನು ಕೊಟ್ಟಿದ್ದಾರೆ. ಇನ್ನು ಹೆಚ್ಚಿಗೆ ಪ್ರಮಾಣದಲ್ಲಿ ಅಕ್ಕಿ ಬೇಕೆಂದು ಒಂದು ಬೇಡಿಕೆಯನ್ನು ಇಟ್ಟಿದ್ದೇವೆ. ಪುನಃ ನಾವು 1563 ಕೋಟಿ ರೂಪಾಯಿಗಳ ಹಣವನ್ನು ಕೇಳಿದ್ದೇವೆ. ಆ ಪ್ರಕಾರವಾಗಿ 190 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನ ಅಮೌಂಟನ್ನು ಕೇಳುವುದಕ್ಕೆ ಮತ್ತೊಂದು ಪ್ರಯತ್ನವನ್ನು ಪಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೆ, ಈಗ ತಾವು ಒಂದು ಹೆಚ್ಚಿನ ಆಹಾರಧಾನ್ಯಗಳನ್ನು ಕೇಳುವುದಕ್ಕೆ ಹೊರಟಿದ್ದೀರಿ, ಆಮೇಲೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೊರಟಿದ್ದೀರಿ. ತಾವು ನಿಯೋಗವನ್ನು ಕರೆದುಕೊಂಡು

ಹೋಗುತ್ತಿದ್ದೇವೆಂದು ಹೇಳಿದ್ದೀರಿ, ಈಗಾಗಲೇ ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಇಲ್ಲಿ ಪ್ರಶ್ನೆ ಏನೆಂದರೆ, ಇಲ್ಲಿ ಏನು ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯುತ್ತಿದೆ. ಕೇಂದ್ರ ಸರ್ಕಾರವು ಈಗ 365 ಲಕ್ಷ ಮೆಟ್ರಿಕ್‌ಟನ್, ಉಚಿತ ಆಹಾರಧಾನ್ಯಗಳನ್ನು ಕೊಟ್ಟಿದೆ. 189 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಟ್ಟಿದೆ. ಅದರ ಪರಿಸ್ಥಿತಿ ಏನಿದೆ? ನೀವು 365 ಲಕ್ಷ ಮೆಟ್ರಿಕ್‌ಟನ್ ಆಹಾರಧಾನ್ಯದಲ್ಲಿ, ಎಷ್ಟು ನೀವು ಉಪಯೋಗವನ್ನು ಮಾಡಿಕೊಂಡಿದ್ದೀರಿ, ಇನ್ನು ಎಷ್ಟು ಕಾಮಗಾರಿಗಳು ನಡೆಯುತ್ತಿದೆ, 189 ಕೋಟಿ ರೂಪಾಯಿಗಳು ಯಾವ ಯಾವ ತಾಲ್ಲೂಕುಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ, ಆ ಒಂದು ಚಿತ್ರಣವನ್ನು ಈ ಒಂದು ಸದನದ ಮುಂದೆ ಕೊಡಬೇಕಾಗುತ್ತದೆಯಲ್ಲಾ?

ಅಧ್ಯಕ್ಷರು:- ಅವರು ಉತ್ತರವನ್ನು ಕೊಡುವಾಗ ಈ ಬಗ್ಗೆ ಹೇಳುತ್ತಾರಲ್ಲಾ?

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಈಗಾಗಲೇ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ನೋಡಿ ಅವರು ಉತ್ತರವನ್ನು ಕೊಟ್ಟಿಲ್ಲ. ಈ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗುತ್ತಿದೆ, ಹಾಗಾದರೆ ಇದನ್ನೆಲ್ಲವನ್ನೂ ಖರ್ಚು ಮಾಡಿದ್ದಾರೆಯೇ ಹೇಗೇ? ಎನ್ನತಕ್ಕಂಥದ್ದರ ಬಗ್ಗೆ ಯೂಟಿಲೈಜೇಷನ್ ಸರ್ಟಿಫಿಕೇಟ್..

ಅಧ್ಯಕ್ಷರು:- ಗೃಹ ಮಂತ್ರಿಗಳು ಇಂಟರ್‌ವ್ಯೂವನ್ನು ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಹಾಗಲ್ಲ ಮಾನ್ಯ ಅಧ್ಯಕ್ಷರೆ, ನೀವು ಕೊಟ್ಟಂತಹವುಗಳನ್ನು ವಿನಿಯೋಗ ಮಾಡಲಾರದೆ ಮತ್ತೆ ಪದೇ ಪದೇ ಕೇಳುತ್ತಿರುವುದು. ಇದು ಸರ್ಕಾರದ ದೃಷ್ಟಿಕೋನವಿದು.

ಅಧ್ಯಕ್ಷರು:- ಅದು ಬರ ಪರಿಹಾರದ ಬಗ್ಗೆ ಡಿಸ್‌ಕಷನ್ ನಡೆಯುತ್ತಿದೆ,

ಶ್ರೀ ಜಗದೀಶ್ ಶೆಟ್ಟರ್:- ಇವರು ಹಣವನ್ನು ಸರಿಯಾಗಿ ವಿನಿಯೋಗ ಮಾಡಿದ್ದಾರಾ? ಏಕೆಂದರೆ, ಇವತ್ತು ಯಾವ ಯಾವ ತಾಲ್ಲೂಕುಗಳಲ್ಲಿ, ಇವುಗಳೆಲ್ಲವನ್ನೂ ನಾವು ಲೆಕ್ಕಾಚಾರ ಮಾಡಿದರೆ...

ಅಧ್ಯಕ್ಷರು:- ಮಾನ್ಯ ಶೆಟ್ಟರ್‌ರವರೇ ಅವರು ಉತ್ತರದಲ್ಲಿ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:- ಒಂದೊಂದು ತಾಲ್ಲೂಕುಗಳಿಗೆ ಒಂದೊಂದು ಕೋಟಿ ರೂಪಾಯಿಗಳ ಮಿನಿಮಮ್ ಕೆಲಸಗಳಾಗಬೇಕು, 189 ಕೋಟಿ ರೂಪಾಯಿಗಳೂ 175 ತಾಲ್ಲೂಕುಗಳಿಗೆ ಒಂದೊಂದು ಕೋಟಿ ರೂಪಾಯಿಗಳ ಕೆಲಸಗಳನ್ನು ಮಾಡಿದ್ದಾರೆಯೋ ಹೇಗೆ? ಒಂದೊಂದು ತಾಲ್ಲೂಕುಗಳಿಗೆ ಒಂದು ಕೋಟಿ ರೂಪಾಯಿಗಳಾದರೂ ಖರ್ಚು ಆಗಬೇಕಲ್ಲವೇ?

ಅಧ್ಯಕ್ಷರು:- ಅವರು ಉತ್ತರವನ್ನು ಹೇಳುವಾಗ ಸಮಗ್ರವಾಗಿ ಹೇಳುತ್ತಾರೆ. ಹೇಳುವುದಕ್ಕೆ Every day ಉತ್ತರ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಈಗ ಏನಾಗುತ್ತದೆಂದರೆ, ಪಬ್ಲಿಕ್‌ನಲ್ಲಿ ಸಾರ್ವಜನಿಕರಿಗೆ ಇವರು ಎಲ್ಲವನ್ನೂ ಖರ್ಚು ಮಾಡಿಬಿಟ್ಟಿದ್ದಾರೆ ಕೇಂದ್ರ ಸರ್ಕಾರದವರು ಏನೂ ಕೊಡುತ್ತಿಲ್ಲ, ಆದ್ದರಿಂದ ಮತ್ತೆ ನಿಯೋಗ ಹೋಗುತ್ತಿದ್ದಾರೆ ಎಂಬ ಅರ್ಥ ಬರುತ್ತದೆ ಆ ಒಂದು ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಹಣವಿದೆ, ನಮ್ಮ ಪ್ರೋಗ್ರಾಮ್ ಅಪ್ರೂವ್ ಆಗಿದೆ, ಆದರೆ ಕಾಳು ಇಲ್ಲ. ಸುಮ್ಮನೆ ಸುಳ್ಳು ಹೇಳುತ್ತಾರೆಂದು ಹೇಳುತ್ತಾರೆ.

ಅಧ್ಯಕ್ಷರು:- ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ಮಾನ್ಯ ವಿರೋಧಪಕ್ಷದ ನಾಯಕರು ಕೇಳಿರುವಂತಹ ಪ್ರಶ್ನೆಗೆ, ಈಗ ನಮಗೆ 365 ಲಕ್ಷ ಟನ್ ಆಹಾರಧಾನ್ಯಗಳನ್ನು ಕೊಟ್ಟಿದ್ದಾರೆ. ಇದರಲ್ಲಿ 3 ಲಕ್ಷದ 63 ಸಾವಿರ ಆಹಾರಧಾನ್ಯಗಳನ್ನು ನಾವು ಲಿಫ್ಟ್ ಮಾಡಿದ್ದೇವೆ. ಸುಮಾರು 2 ಲಕ್ಷದ 91 ಸಾವಿರ ಟನ್ ಆಹಾರಧಾನ್ಯಗಳನ್ನು ನಾವು ಈಗಾಗಲೇ ಖರ್ಚು ಮಾಡಿ ಯುಟಿಲೈಜೇಷನ್ ಸರ್ಟಿಫಿಕೇಟ್‌ನ್ನು ಕಳುಹಿಸಿಕೊಟ್ಟಿದ್ದೇವೆ. ಈಗ ತಾವು ಹೇಳಿರುವ ಪ್ರಕಾರ ಬರಗಾಲದ ಬಗ್ಗೆ ಚರ್ಚೆ ನಡೆದಿದೆ, ಅದರ ಬಗ್ಗೆ ನಾನು ಡಿಟೇಲ್ ಆದ ಉತ್ತರವನ್ನು ನಿಮಗೆ ಜಿಲ್ಲಾವೈಸ್ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಚಿವರು 189 ಕೋಟಿ ರೂಪಾಯಿಗಳ ಬಗ್ಗೆ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ:- ಅದರ ಬಗ್ಗೆಯೂ ಹೇಳುತ್ತೇನೆ. ಈಗ 189 ಕೋಟಿ ರೂಪಾಯಿಗಳಲ್ಲಿ ಸುಮಾರು ಈಗಾಗಲೇ 54 ಕೋಟಿ ರೂಪಾಯಿಗಳನ್ನು ಒಂದು ಇಲಾಖೆಯು ಬಿಡುಗಡೆ ಮಾಡಿದೆ. 13 ಕೋಟಿ ರೂಪಾಯಿಗಳನ್ನು ವೆಟರ್ನರಿ ಡಿಪಾರ್ಟ್‌ಮೆಂಟ್‌ನವರು ಅಲಾಟ್ ಮಾಡಿದೆ. ಸುಮಾರು 50 ಕೋಟಿ ರೂಪಾಯಿಗಳನ್ನು ನಾವು ಈಗ ಏನು ಕೃಷಿ ಇಲಾಖೆಗೆ ಕೊಡಬೇಕಾದಂತಹ ಸಂದರ್ಭದಲ್ಲಿ ಸಚಿವ ಸಂಪುಟದ ಉಪಸಮಿತಿಯಲ್ಲಿ ನಿರ್ಣಯ ತೆಗೆದುಕೊಂಡಿದೆ. ಅದರ ಬಗ್ಗೆ ವಿವರವಾದ ಮಾಹಿತಿಯನ್ನು ತಮಗೆ ಉತ್ತರವನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಎಲ್ಲಾ ವರದಿಯನ್ನು ತಮಗೆ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಈಗ ಅಧಿವೇಶನ ನಡೆಯತಕ್ಕಂತಹ ಸಂದರ್ಭದಲ್ಲಿ ರಾಜ್ಯದಲ್ಲಿ ಬರಗಾಲವಿರುವಂತಹ ಸಂದರ್ಭದಲ್ಲಿ ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಇವರು ಹೋಗಿ ಶ್ರೀ ಚಂದ್ರಬಾಬು ನಾಯ್ಡುರವರು ಬಿಡುಗಡೆ ಮಾಡಿಸಿಕೊಂಡು ಬಂದಹಾಗೆ ಇವರು ಸಹಿತ ಆಹಾರಧಾನ್ಯಗಳನ್ನು ಬಿಡುಗಡೆ ಮಾಡಿಸಿಕೊಂಡಿದ್ದರೆ ಪರವಾಗಿಲ್ಲ. ಅಲ್ಲಿಕರತಕ್ಕಂತಹ ಸರ್ಕಾರ ಯಾವುದು? ಅದೇ ಪಕ್ಷದ ವಿರೋಧಪಕ್ಷದ ನಾಯಕರು ಇಲ್ಲಿ ಇದ್ದಾರೆ, ಅವರನ್ನೂ ಸಹ ಕರೆದುಕೊಂಡು ಹೋಗಬಹುದಾಗಿತ್ತು. ಬಾಕಿ ಸಂದರ್ಭಗಳಲ್ಲಿ ನಿಮಗೆ ಸರ್ವಪಕ್ಷದವರು ಬೇಕು ಎಂದು ಹೇಳುತ್ತೀರಿ. ಈ ಸಂದರ್ಭದಲ್ಲಿ ಕರೆದುಕೊಂಡು ಹೋದರೆ ತೊಂದರೆ ಏನು? It would have been a more effective delegation. ಈಗ ಹೋಂ ಮಿನಿಸ್ಟರ್ ಅಧ್ಯಕ್ಷತೆಯಲ್ಲಿ ಹೋಗುತ್ತಿರುವಂತಹ ಡೆಲಿಗೇಷನ್ ಏನಿದೆ, ಆ ಡೆಲಿಗೇಷನ್ ಏನು ರೆಪ್ರಸೆಂಟೇಷನ್ ಕೊಡುತ್ತೀರಾ? we should know it ಸದನ ನಡೆಯುವಾಗ ಅದರ ಮಾನ್ಯ ಮಂತ್ರಿಗಳು ಹೇಳಿರತಕ್ಕಂಥದ್ದು ಅಲ್ಲ, ಈ ಸಚಿವಸಂಪುಟದಲ್ಲಿ ಇರದೇ ಇರತಕ್ಕಂತಹ ಒಬ್ಬ ಸದಸ್ಯರು ಹೇಳಿರತಕ್ಕಂತಹ ವಿಚಾರವಾಗಿದೆ. ಅವರು ಕೇಂದ್ರ ಸರ್ಕಾರಕ್ಕೆ ನಾವು ಮನವಿಯನ್ನು ಕೊಡುತ್ತಿದ್ದೇವೆ, ಈ ರೀತಿಯ ಡೆಲಿಗೇಷನ್ ಹೋಗುತ್ತಿದೆ ಎಂದು ಪತ್ರಿಕೆಗಳಲ್ಲಿ ನಾವು ಓದಿರುವಂತಹದ್ದು. ಆದರೆ ಡಿಟೇಲ್ ಆಗಿ ಇಂತಹ ಸನ್ನಿವೇಶಗಳಲ್ಲಿ ಹೋಗುವುದರಿಂದ ಅದರ ಎಫೆಕ್ಟೀವ್‌ನೆಸ್ ಕೇಂದ್ರ ಸರ್ಕಾರದ ಮೇಲೆ ಜಾಸ್ತಿ ಇರುತ್ತದೆ. ಮತ್ತೆ ಅದರಿಂದ ಉಪಯೋಗವು ಸಹಿತ ಆಗುತ್ತದೆಂಬ ದೃಷ್ಟಿಯಿಂದ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಅಧ್ಯಕ್ಷರೆ, ಆಶ್ವಾಸನೆಯನ್ನು ನಮ್ಮ ಸದನಕ್ಕೆ ಕೊಟ್ಟಿದ್ದರು ಅದೇನೆಂದರೆ, 189 ಕೋಟಿ ರೂಪಾಯಿಗಳು ನಾವು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರಲ್ಲಾ, ನಾವೇನು ಕೇಳಿದ್ದೇವೆಂದರೆ, ಇದು ನ್ಯಾಷನಲ್ ಕೆಲಾಮಿಟಿ ರಿಲೀಫ್ ಫಂಡ್‌ನಿಂದ Annual allocation ನಿಂದ ಎಷ್ಟು ರಿಲೀಸ್ ಮಾಡಿದ್ದೀರಿ, ಈ ದವಸಧಾನ್ಯಗಳನ್ನು ಬಿಡುಗಡೆ ಮಾಡುವಂತಹ ಕ್ಯಾಷ್ ಕಾಂಪೊನೆಂಟ್‌ನ್ನು ಎಷ್ಟು ಬಿಡುಗಡೆ ಮಾಡಿದ್ದೀರಿ? ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬಿಡುಗಡೆ ಮಾಡಿದ್ದೀರಿ ಎಂದು ನಾವು ಕೇಳಿದ್ದೆವು. ಅದಕ್ಕೆ ಅವರು ಜಿಲ್ಲಾವಾರು ಈಗಾಗಲೇ ನಾವು ಮಾಹಿತಿಯನ್ನು ಕೊಡುತ್ತೇವೆ, ಹಣ ಜಿಲ್ಲಾಧಿಕಾರಿಗಳ ಹತ್ತಿರವಿದೆ ಎಂದು ತಾವು ಹೇಳಿದ್ದೀರಿ. ಅದರ ಬಗ್ಗೆ ವಿವರವಾದಂತಹ ಒಂದು ಅಂಕಿಅಂಶಗಳನ್ನು ನಮಗೆ ಕೊಡಬೇಕಾಗಿದೆ.

ಅಧ್ಯಕ್ಷರು:- ಮಾನ್ಯ ಸೋಮಶೇಖರ್‌ರವರೆ, ಅವರು ಉತ್ತರವನ್ನು ಕೊಡುವಾಗ ಹೇಳುತ್ತಾರೆ ಬಿಡಿ. ಪ್ರತಿ ದಿವಸ ಉತ್ತರವನ್ನು ಕೊಡುವುದಕ್ಕಾಗುತ್ತದೆಯೇ? we have to fix up some timeings for the reply ಉತ್ತರವನ್ನು ಕೊಡುವಾಗ ಕೇಳುತ್ತಾರೆ.

ಶ್ರೀ ಬಿ. ಸೋಮಶೇಖರ್:- ಈಗ ಕೇಂದ್ರಸರ್ಕಾರಕ್ಕೆ ಡೆಲಿಗೇಷನ್ ಹೋಗತಕ್ಕಂಥದ್ದರಲ್ಲಿ ತಪ್ಪೇನೂ ಇಲ್ಲ, ಹೋಗಬೇಕು. ಆದರೆ ಇವತ್ತು ಚರ್ಚೆ ನಡೆಯುತ್ತಿದೆ, ಚರ್ಚೆಯು ಸಂಪೂರ್ಣವಾದ ಮೇಲೆ ಆ ಸಾರಾಂಶವನ್ನು ತೆಗೆದುಕೊಂಡು ಎಲ್ಲಾ ಪಕ್ಷಗಳ ನಾಯಕರುಗಳನ್ನು ಕರೆದುಕೊಂಡು ಹೋಗಿದ್ದರೆ ಬಹುಶಃ ಅನುಕೂಲವಾಗುತ್ತಿತ್ತು. ಆಮೇಲೆ ತಾವು ಒಂದು ಕೇಂದ್ರದ ಮಂತ್ರಿಗಳ ಜೊತೆಗೆ, ಪ್ರಧಾನಮಂತ್ರಿಗಳ ಜೊತೆಗೆ ಮೀಟಿಂಗ್‌ನ್ನು ಫಿಕ್ಸ್ ಮಾಡಿಸಬಹುದಾಗಿತ್ತು. ಇದು ಅಷ್ಟು ಎಫೆಕ್ಟೀವ್ ಆಗುವುದಿಲ್ಲವೆಂದು ನನಗನಿಸುತ್ತದೆ.

ಅಧ್ಯಕ್ಷರು:- ಇವರು ಮೀಟಿಂಗ್‌ನ್ನು ಫಿಕ್ಸ್ ಮಾಡಿಬಿಟ್ಟಿದ್ದಾರೆ, ಅಲ್ಲಿ ಪಾರ್ಲಿಮೆಂಟ್ ನಡೆಯುತ್ತಿದೆ. ಅಲ್ಲಿ ಬಿಜಿಯಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ಇದು ಒಂದು ರೋಟೀನ್ ವಿಚಾರ. ಬರಗಾಲದ ವಿಚಾರದಲ್ಲಿ ನಮ್ಮಲ್ಲಿ ಒಂದು ಉಪಸಮಿತಿ ರಚನೆಯಾಗಿದೆ, ಸೆಂಟ್ರಲ್‌ನಲ್ಲಿಯೂ ಇದೆ. ಈ ವಿಚಾರದಲ್ಲಿ ರೋಟೀನ್ ವಿಚಾರ, ನಮ್ಮಿಂದ ಏನೇನು ಆಗುತ್ತದೆ ಆದನ್ನು ಶ್ರೀ ಜಯಚಂದ್ರರವರು ನಮ್ಮ ಸ್ಟೇಟ್ ರೆಪ್ರೆಸೆಂಟೇಟಿವ್ ಅವರು ಮಾಡುತ್ತಾರೆ. ಅವರು ಅವರ ಡ್ಯೂಟಿಯನ್ನು ಮಾಡುತ್ತಾರೆ. ಇದು ಪಾಲಿಸಿ ಡಿಸಿಷನ್ ಆಗಿದ್ದರೆ ನಿಜ ಇಲ್ಲಿ ಬಂದು ಅನೌನ್ಸ್ ಮಾಡಬೇಕಾಗಿತ್ತು, ಮತ್ತೊಂದು ಇದು ಒಂದು ಅರ್ಜಿಯನ್ನು ಕೊಡುವುದು, ಮನವಿಯನ್ನು ಕೊಡುವುದು, ಡಿಮ್ಯಾಂಡ್ ಮಾಡುವುದು ಇವೆಲ್ಲಾ ಪ್ರತಿಯೊಂದು ವಿಚಾರಕ್ಕೂ ಬಂದು ಅಪೋಜಿಷನ್ ಪಾರ್ಟಿಗೆ ಗೊತ್ತಾಗಬಾರದೆಂದಲ್ಲ, ಇದು ಗೊತ್ತಾಗಬೇಕು ನಿಜ. ಆದರೆ ನಾವು ಪ್ರತಿಯೊಂದನ್ನೂ ಏನು ಅರ್ಜಿಯನ್ನು ಕೊಡುತ್ತೇವೆಂದು ಅಲ್ಲಿ ತೋರಿಸುವುದಕ್ಕೆ ಸಾಧ್ಯವೇ? ಇದು ನನಗೆ ಹೊಸ ವಿಚಾರವಾಗಿದೆ.

ಅಧ್ಯಕ್ಷರು:- ಆಯಿತು ಬಿಡಿ. ಈಗ ಮೊದಲು ಒಂದೆರಡು ಬಿಲ್‌ಗಳನ್ನು ಮಾಡೋಣ. ನಾವು ಬಿಎಸಿ ಮೀಟಿಂಗ್‌ನಲ್ಲಿ ಮಾತನಾಡಿರುವ ಪ್ರಕಾರ ಮಾನ್ಯ ಎಸ್.ಎಂ. ಕೃಷ್ಣಾರವರು. ಅವರು ಇಲ್ಲದಿದ್ದರೆ ಪರವಾಗಿಲ್ಲ, ಮಿಸ್ಟರ್ ಶಿವಕುಮಾರ್‌ರವರೇ ತಾವು please move the Bill.